ಶ್ರೀ ವೀರೇಂದ್ರ ಪಾಟೀಲ್.—ನಾನು ಹೇಳಿದ್ದು ಒಂದು ಸಲೆಕ್ಷನ್ ಸಮಿತಿ ಎಂದಿರುತ್ತದೆ. Its members are Chairman or Member of the U. P. S. C., Chief Secretary, Development Commissioner, Senior-most Divisional Commissioner, Chairman, M.R.A.T., and a representative of the Government of India not below the rank of a Joint Secretary. ಅವರು ಇಲ್ಲಿಗೆ ಪ್ರತಿ ವರ್ಷವೂ ಬಂದು ಇಲ್ಲಿಯ ಎಲಿಜಿಬಿಲಿಟಿ ಲಿಸ್ಟನ್ನು ನೋಡಿ ಆದರಲ್ಲಿ ಅವರು ಸೆಲೆಕ್ಟ್ ಮಾಡುತ್ತಾರೆ. ಹಾಗೆ ಅವರು ಸೆಲೆಕ್ಟ್ ಮಾಡಿದ ಲಿಸ್ಟ್ ಕೇಂದ್ರ ಸರ್ಕಾರಕ್ಕೆ ಹೋಗುತ್ತದೆ. ಅವರು ಅಲ್ಲಿ ಅದನ್ನು ಅಂಗೀಕಾರ ಮಾಡಿ ನೋಟಿಫೈ ಮಾಡುತ್ತಾರೆ.

ಶ್ರೀ ಕೆ ಎಚ್. ರಂಗನಾಥ್.—ಈ ವರ್ಷ ಹಾಗೆ ಸೆಲೆಕ್ಟ್‌ಮಾಡಿ ಕೇಂದ್ರಕ್ಕೆ ರವಾನೆ ಮಾಡಿರತಕ್ಕ ಪಟ್ಟಿಯಲ್ಲಿ ನಮ್ಮ ಮೈಸೂರು ರಾಜ್ಯದವರು ಯಾರಾದರೂ ಇದ್ದಾರೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಇದ್ದಾರೆ. ಕೆಲವರನ್ನು ಸೆಲೆಕ್ಟ್ ಮಾಡಿದ್ದಾರೆ.

SRI C. K. RAJAIAH SETTY.—The selection authority is the Union Public Service Commission. May I know who is to submit the list-is it the State Government or the person who wants to apply for it ?

ಶ್ರೀ ವೀರೇಂದ್ರ ಪಾಟೀಲ್.—ಐ.ಎ.ಎಸ್. ಕೇಡರಿಗೆ ಡೈರೆಕ್ಟ್ ರೆಕ್ರೂಟ್‌ಮೆಂಟ್ ಮಾಡತಕ್ಕ ಬಗ್ಗೆ ಯಾರಾದರೂ ಅದಕ್ಕೆ ಅಪ್ಲೈ ಮಾಡಿಕೊಳ್ಳಬಹುದು. ಆದರೆ ಇಲ್ಲಿ ಇರತಕ್ಕ ಪ್ರಶ್ನೆ ಅದಲ್ಲ. ಇಲ್ಲಿ ಬರೀ ಪ್ರಮೋಷನ್ ಮೇಲೆ ಭರ್ತಿಯಾಗತಕ್ಕವರ ವಿಚಾರ ಮಾತ್ರ ಇಲ್ಲಿ ಬರುತ್ತದೆ. ಈ ಪ್ರಮೋಷನ್ ಮೇಲೆ ಭರ್ತಿಮಾಡುವುದರಲ್ಲಿ ರಿಜರ್ವೇಷನ್ ಇಲ್ಲ. ಇದಕ್ಕೆ ಒಂದು ಸಲೆಕ್ಷನ್ ಕಮಿಟಿ ಎಂದು ಒಂದು ಕಮಿಟಿ ಇದೆ. ಅದರಲ್ಲಿ ಯು. ಪಿ. ಎಸ್ಸಿ. ಅಧಿಕಾರಿಗಳು ಇರುತ್ತಾರೆ. ಅದರಲ್ಲಿ ಮತ್ತೆ ಕೇಂದ್ರ ಸರ್ಕಾರದ ಪ್ರತಿನಿಧಿಗಳಾಗಿ ಇಬ್ಬರು ಅಧಿಕಾರಿಗಳು ಇರುತ್ತಾರೆ. ನಮ್ಮಲ್ಲಿಯಕೆ ಲವು ಅಧಿಕಾರಿಗಳು ಆ ಸಮಿತಿಯಲ್ಲಿದ್ದಾರೆ. ಅವರು ಆಯಾ ರಾಜ್ಯಗಳಲ್ಲಿ ಇರತಕ್ಕ ಎಲಿಜಿಬಿಲಿಟಿ ಲಿಸ್ಟನ್ನು ನೋಡಿ ಸಲೆಕ್ಟ್ ಮಾಡುತ್ತಾರೆ. ಅವರು ಮಾಡಿದ ಲಿಸ್ಟ್ ಕೇಂದ್ರಕ್ಕೆ ಹೋಗಿ ಅಲ್ಲಿ ಅವರಿಂದ ಅನುಮೋದನೆ ಪಡೆದು ನೋಟಿಫೈ ಆಗುತ್ತದೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ನಾನ್ ಐ.ಎ.ಎಸ್‌ನ್ನು ಎಂ. ಎ.ಎಸ್.ಗೆ ಈಕ್ವೆಟ್ ಮಾಡಿ, ಏಕೆಂದರೆ ಅವರಲ್ಲೂ ದಕ್ಷರೂ ಬುದ್ಧಿಷಂತರೂ ಇರುತ್ತಾರೆ, ಅವರನ್ನು ಐ.ಎ.ಎಸ್. ಕೇಡರಿಗೆ ಏಕೆ ಪ್ರಮೋಟ್ ಮಾಡಬಾರದು ? ಸೀನಿಯರ್ ನಾನ್ ಐ.ಎ.ಎಸ್. ಹರಿಜನ ಅಧಿಕಾರಿಗಳಿಗೆ ಆ ಪೋಸ್ಟ್‌ಯನ್ನು ಕೊಡಿಸುವುದಕ್ಕೆ ಸರ್ಕಾರಕ್ಕೆ ಆಸಕ್ತಿಯಿಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ಇದು ಪಕ್ಕಾ ಪ್ರಮೋಷನ್ ವಿಚಾರ. ಇದರಲ್ಲಿ ರಿಜರ್ವೇಷನ್ ವಿಚಾರ ಬರುವುದಿಲ್ಲ ಇದನ್ನು ಆಯಾಯ ವ್ಯಕ್ತಿಯ ಎಸ್. ಆರ್. ಮತ್ತು ಅವರ ಪರ್‌ಫಾರ್ಮೆನ್ಸ್ ನೋಡಿ ಮಾಡುತ್ತಾರೆ.

MUNICIPAL HIGH SCHOOLS

463. SRI J. R. HALASWAMY (Jagalur):—

Will the Minister of State for Municipal Administration be pleased to State: —

(*a*) the number of Municipal High Schools in the State ;

(*b*) the number of Municipal High Schools in the erstwhile Mysore State ;

(Sri J. R. Halaswamy)

(*c*) the number of teachers working in these High Schools of the erstwhile Mysore State ?

Sri B. M. Patil (*Minister of State for Municipal Administration*):—

(*a*) 103

(*b*) 78

(*c*) 1,227

ಶ್ರೀ ಜೆ. ಆರ್. ಹಾಲಸ್ವಾಮಿ.—ಸ್ವಾಮಿ, ನಾನು ಈ ಪ್ರಶ್ನೆಯನ್ನು ಕಳುಹಿಸುವ ಕಾಲಕ್ಕೆ ಇದಕ್ಕೆ ಉತ್ತರವನ್ನು ವಿದ್ಯಾಮಂತ್ರಿಗಳು ಒದಗಿಸಬೇಕೆಂದು ಕೇಳಿದ್ದೆ. ಆದರೆ ಈಗ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಮಂತ್ರಿಗಳು ಉತ್ತರ ಕೊಡುತ್ತಿದ್ದಾರೆ. ಏಕೆ ? ಮತ್ತು ಈ ಹಿಂದೆ ಸಂಸ್ಥಾನವು ಇತರಕ್ಕೆ ಎಲ್ಲಾ ಮುನಿಸಿಪಾಲಿಟಿಗಳ ಅಧ್ಯಕ್ಷರ ಸಮ್ಮೇಳನ ನಡೆದಾಗ ಆದರಲ್ಲಿ ಈ ಎಲ್ಲಾ ಮುನಿಸಿಪಲ್ ಹೈಸ್ಕೂಲುಗಳನ್ನೂ ಸರ್ಕಾರದವರು ವಹಿಸಿಕೊಳ್ಳಬೇಕೆಂದು ನಿರ್ಣಯ ಮಾಡಿದ್ದರಲ್ಲವೆ ?

ಶ್ರೀ ಬಿ ಎಂ. ಪಾಟೀಲ್.—ಅದನ್ನು ಅವರು ಮಾಡಿರಬಹುದು. ಆದರೆ ಈ ವಿಷಯ ಶಿಕ್ಷಣ ಖಾತೆಯಲ್ಲಿ ಪರಿಶೀಲನೆಯಲ್ಲಿದೆ. ಅದಿನ್ನೂ ತೀರ್ಮಾನವಾಗಿಲ್ಲ.

ಶ್ರೀ ಪಿ. ಆರ್. ರಂಗೇಗೌಡ.—೨೬ ಮುನಿಸಿಪಲ್ ಹೈಸ್ಕೂಲುಗಳಲ್ಲಿ ಸುಮಾರು ೧೨೨೭ ಜನ ಕನ್ನಡ ಉಪಾಧ್ಯಾಯರುಗಳ ಆಭಾವವಿದೆ ಎಂಬುದು ಸರ್ಕಾರದವರ ಗಮನಕ್ಕೆ ಬಂದಿಲ್ಲವೇ ?

ಶ್ರೀ ಬಿ. ಎಂ. ಪಾಟೀಲ್.—ಆ ವಿಚಾರ ಸರ್ಕಾರದ ಗಮನಕ್ಕೆ ಬಂದಿಲ್ಲ.

ಶ್ರೀ ಜೆ. ಆರ್. ಹಾಲಸ್ವಾಮಿ.—ರಾಮನಗರಂ ಮುನಿಸಿಪಲ್ ಹೈಸ್ಕೂಲು ಒಂದನ್ನು ಮಾತ್ರ ಸರ್ಕಾರದವರು ತೆಗೆದುಕೊಂಡು ಬಾಕಿ ಶಾಲೆಗಳನ್ನು ತೆಗೆದುಕೊಳ್ಳದಿರುವುದಕ್ಕೇನು ಕಾರಣ ?

ಶ್ರೀ ಬಿ. ಎಂ. ಪಾಟೀಲ್.—ಈ ವಿಚಾರವಿನ್ನೂ ಶಿಕ್ಷಣ ಖಾತೆಯಲ್ಲಿ ಪರಿಶೀಲನೆಯಲ್ಲಿದೆ ಎಂದು ಆಗಲೇ ಹೇಳಿದ್ದೇನೆ.

ಶ್ರೀ ಜೆ. ಆರ್. ಹಾಲಸ್ವಾಮಿ.—ಅವರನ್ನು ಡಿ.ಪಿ.ಐ. ಅವರ ಆಡಳಿತಕ್ಕೆ ಒಳಪಡಿಸದಿರುವುದರಿಂದ ಅವರ ಪ್ರಮೋಷನ್ ಇತ್ಯಾದಿಗಳಿಗೆಲ್ಲಾ ಬಹಳ ಧಕ್ಕೆ ಬರುತ್ತಿದೆ ಎಂದು ಅವರು ಬಹಳ ಕಳವಳ ಗೊಂಡಿದ್ದಾರೆ. ಆದ್ದರಿಂದ ಅವರಿಗೇನೂ ಅಂಥ ತೊಂದರೆಗಳಾಗದಂತೆ ಅವರ ಹಿತರಕ್ಷಣೆ ಮಾಡುತ್ತೀರಾ ?

ಶ್ರೀ ಬಿ. ಎಂ. ಪಾಟೀಲ್.—ಮಾನ್ಯ ವಿದ್ಯಾ ಸಚಿವರೂ ಇಲ್ಲೆ ಇದ್ದಾರೆ. ಇದು ಅವರಿಗೆ ಸೇರಿದ ವಿಷಯ. ಆದರೆ ಈಗ ಈ ಶಾಲೆಗಳೆಲ್ಲಾ ನಗರಾಡಳಿತಕ್ಕೆ ಸಂಬಂಧಪಟ್ಟವರು ಕಾರ್ಯಕ್ರಮ ಕೈಗೊಳ್ಳುತ್ತಿದ್ದಾರೆ. ಯಾರಿಗಾದರೂ ಅಂಥ ತೊಂದರೆಯಾದರೆ ಅವರು ಸರ್ಕಾರಕ್ಕೆ ಮನವಿ ಮಾಡಿಕೊಂಡರೆ ಅದನ್ನು ಪರಿಶೀಲಿಸಲಾಗುತ್ತದೆ.